ದಿನಾಂಕಃ **05.11.2025**

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

<u>ಪಾಟೀ ಸವಾಲುಃ **4** ಮತ್ತು **8** ನೇ ಪ್ರತಿವಾದಿಗಳ ಪರ ಶ್ರೀ ಜಿ.ಬಿ.ಹೆಚ್. ವಕೀಲರಿಂದಃ</u>

ನಾನು ಪಿಯುಸಿವರೆಗೆ ವ್ಯಾಸಂಗ ಮಾಡಿರುತ್ತೇನೆ. ಜಮೀನುಗಳಿಗೆ ಸಂಬಂಧಿಸಿದ ದಾಖಲೆಗಳ ಬಗ್ಗೆ ನನಗೆ ಮಾಹಿತಿ ಇರುತ್ತದೆ ಎಂದರೆ ಸರಿ. ಸರ್ವೆ ನಂ. 98 ಹುಣಸವಾಡಿ ಗ್ರಾಮಕ್ಕೆ ಸೇರಿರುತ್ತದೆ. ಸರ್ವೆ ನಂ. 98/1 ರ ಒಟ್ಟು ವಿಸ್ತೀರ್ಣ ನನಗೆ ಗೊತ್ತಿರುವುದಿಲ್ಲ. ಸರ್ವೆ ನಂ. 98/1 ರಲ್ಲಿ ಎಷ್ಟು ಪೋಡಿಗಳಾಗಿರುತ್ತವೆ ಎಂದು ನನಗೆ ಗೊತ್ತಿರುವುದಿಲ್ಲ. ದಾವಾ 1 ನೇ ಆಸ್ತಿಯ ಸರ್ವೆ ನಂ. 98/2 ಎ. ದಾವಾ 1 ಮತ್ತು 2 ನೇ ಆಸ್ತಿಗಳ ವಿಸ್ತೀರ್ಣ ಮತ್ತು ಚಕ್ಕುಬಂಧಿ ನನಗೆ ಗೊತ್ತಿರುವುದಿಲ್ಲ. ದಾವಾ 1 ನೇ ಆಸ್ತಿಯಲ್ಲಿ 30 ಗುಂಟೆ ಜಮೀನು ವಾದಿಗೆ ಸೇರಿರುತ್ತದೆ ಎಂದು ನಮೂದು ಮಾಡಿದ್ದು ಈ ದಾವೆಯಲ್ಲಿ ಯಾರು ವಾದಿಗಳಾಗಿರುತ್ತಾರೆ ಎಂದು ಪ್ರಶ್ನಿಸಿದ್ದಕ್ಕೆ ಸಾಕ್ಷಿಯು ನನಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ಸದರಿ 30 ಗುಂಟೆ ಜಮೀನು ದಾವಾ 1 ನೇ ಸ್ವತ್ತಿನಲ್ಲಿ ಯಾವ ದಿಕ್ಕಿನಲ್ಲಿರುತ್ತದೆ ಮತ್ತು ಅದರ ಚಕ್ಕುಬಂಧಿಯನ್ನು ಹೇಳಲು ಆಗುವುದಿಲ್ಲ. ಸದರಿ 30 ಗುಂಟೆ ಜಮೀನು ವಾದಿಗಳ ಪಿತ್ರಾರ್ಜಿತ ಜಮೀನು ಎಂದು ನಾನು ದಾಖಲೆ ನೋಡಿರುವುದಿಲ್ಲ ಆದರೆ ವಕೀಲರು ತಿಳಿಸಿರುತ್ತಾರೆ. ಸದರಿ 30 ಗುಂಟೆ ಜಮೀನು ಬೀಳು ಜಮೀನಾಗಿರುತ್ತದೆ. ಸದರಿ 30 ಗುಂಟೆ ಜಮೀನನ್ನು ಯಾರು ಸಾಗುವಳಿ ಮಾಡುತ್ತಿರುತ್ತಾರೆ ಎಂದು ಹೇಳಲು ಆಗುವುದಿಲ್ಲ.

**2.** ವಾದಿಗಳ ಜಮೀನಿನ ಸ್ವಾಧೀನಾನುಭವಕ್ಕೆ ನಾನು ಯಾವುದೇ ತೊಂದರೆ ನೀಡಿರುವುದಿಲ್ಲ. ನಮ್ಮ ವಕೀಲರು ಶೇಷಾದ್ರಿ. ನನ್ನ ಪ್ರತಿವಾದ ಪತ್ರದಲ್ಲಿ ನಮೂದು

ಮಾಡಿರುವ ಅಂಶಗಳ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಸರ್ವೆ ನಂ. 98/1 ಎ 2 ಎಂದು ಯಾವ ವರ್ಷದಲ್ಲಿ ಪೋಡಿಯಾಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ನನ್ನ ತಂದೆ ಖರೀದಿ ಮಾಡಿದ ಕ್ರಯ ಪತ್ರದಂತೆ ಖಾತೆ ವರ್ಗಾವಣೆಯಾಗಿರುವುದಿಲ್ಲ. ಇಂದಿನವರೆಗೂ ನಮ್ಮ ತಂದೆ ಖರೀದಿ ಮಾಡಿದ ಜಮೀನಿನ ಖಾತೆ ನಮ್ಮ ಹೆಸರಿಗೆ ವರ್ಗಾವಣೆಯಾಗಿರುವುದಿಲ್ಲ. ಸದರಿ ಜಮೀನಿನ ಖಾತೆ ವರ್ಗಾವಣೆ ಮಾಡಿಸಿಕೊಳ್ಳಲು ನಾನು ಮೊದಲು ಪ್ರಯತ್ನಿಸಿರುವುದಿಲ್ಲ ಆದರೆ ನನ್ನ ತಂದೆ ಏನು ಮಾಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಈಗ ನಾನು ಪ್ರಯತ್ನಿಸುತ್ತಿರುತ್ತೇನೆ. ನಾನು ಖಾತೆ ವರ್ಗಾವಣೆ ಮಾಡಲು ಅರ್ಜಿ ಸಲ್ಲಿಸಿದ ಬಗ್ಗೆ ದಾಖಲೆಗಳನ್ನು ವಕೀಲರಿಗೆ ನೀಡಿರುತ್ತೇನೆ.

**3.** ನನ್ನ ತಂದೆ ಖರೀದಿ ಮಾಡಿದ 6 ಗುಂಟೆ ಜಮೀನು ಸರ್ವೆ ನಂ. 98/1 ರ ಯಾವ ದಿಕ್ಕಿನಲ್ಲಿ ಬರುತ್ತದೆ ಎಂದು ಹೇಳಲು ಆಗುವುದಿಲ್ಲ. ಸದರಿ 6 ಗುಂಟೆ ಜಮೀನಿನ ಚಕ್ಕುಬಂಧಿಯಲ್ಲಿ ಯಾರು ಎಷ್ಟು ಗುಂಟೆ ಜಮೀನಿನಲ್ಲಿ ಸ್ವಾಧೀನದಲ್ಲಿರುತ್ತಾರೆ ಎಂದು ಹೇಳಲು ಆಗುವುದಿಲ್ಲ. ಸದರಿ 6 ಗುಂಟೆ ಜಮೀನಿನಲ್ಲಿ ನಾನು ಅಥವಾ ನನ್ನ ತಂದೆ ಸ್ವಾಧೀನದಲ್ಲಿರುತ್ತೇವೆ ಎಂಬುದಕ್ಕೆ ಕಂದಾಯ ದಾಖಲೆಗಳು ಅಥವಾ ಕಂದಾಯ ಪಾವತಿ ಮಾಡಿದ ದಾಖಲೆಗಳು ಇರುವುದಿಲ್ಲ. ಸಾಕ್ಷಿ ಮುಂದುವರೆದು ತುಂಡು ಭೂಮಿಗೆ ಕಂದಾಯ ಇರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ಸದರಿ ವಿಚಾರವನ್ನು ಸರ್ಕಾರದಿಂದ ನಿರ್ಧರಿಸಲಾಗಿರುತ್ತದೆ.

**4.** ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ನಮೂದು ಮಾಡಿರುವ ಚಕ್ಕುಬಂಧಿಯನ್ನು ಕ್ರಯ ಪತ್ರದ ಆಧಾರದ ಮೇಲೆ ಮಾಡಿಸಿರುತ್ತೇನೆ . ಸದರಿ ಚಕ್ಕುಬಂಧಿಯಲ್ಲಿ ನಮೂದು

ಮಾಡಿರುವ ಶಿವಯ್ಯ ಹುಣಸವಾಡಿ ಗ್ರಾಮಸ್ಥರು , ಅವರು ಈಗ ಜೀವಂತವಾಗಿರುವುದಿಲ್ಲ. ಪ್ರಸ್ತುತ ಸದರಿ 6 ಗುಂಟೆ ಜಮೀನಿನ ಚಕ್ಕುಬಂಧಿಯನ್ನು ಯಾರು ಯಾರು ಜಮೀನನ್ನು ಹೊಂದಿರುತ್ತಾರೆಂದು ನನಗೆ ಗೊತ್ತಿರುವುದಿಲ್ಲ. ನಮ್ಮ ಮೂಲ ಕ್ರಯ ಪತ್ರವನ್ನು ವಕೀಲರಿಗೆ ನೀಡಿರುತ್ತೇನೆ. ನನ್ನ ತಂದೆಗೆ ನಾವು 6 ಜನ ಮಕ್ಕಳಿರುತ್ತೇವೆ.

**5.** ನನ್ನ ತಂದೆಗೆ ಕ್ರಯ ಪತ್ರ ಬರೆದುಕೊಟ್ಟವರಿಗೆ ಸರ್ವೆ ನಂ 98/1 ರಲ್ಲಿ ಜಮೀನನ್ನು ಮಾರಾಟ ಮಾಡಲು ಹಕ್ಕು ಇರಲಿಲ್ಲ ಎಂದು ಸೂಚಿಸುವುದು ಸರಿಯಲ್ಲ. ನನ್ನ ತಂದೆಗೆ ಕ್ರಯ ಪತ್ರ ಬರೆದುಕೊಟ್ಟವರಿಗೆ ಸದರಿ ಆಸ್ತಿ ಹೇಗೆ ಬಂದಿರುತ್ತದೆ ಎಂದು ನಾನು ದಾಖಲೆಗಳನ್ನು ನೋಡಿರುವುದಿಲ್ಲ. ಸರ್ವೆ ನಂ. 98/1 ರಲ್ಲಿ ನನ್ನ ತಂದೆಗೆ ಅಥವಾ ನನಗೆ ಯಾವುದೇ ಹಕ್ಕು ಅಥವಾ ಸ್ವಾಧೀನ ಇರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ.

**6.** ವಾದಿಗಳನ್ನು ನಾನು ನೋಡಿರುತ್ತೇನೆ. ಆದರೆ ಅವರ ತಂದೆಯ ಹೆಸರುಗಳು ಮತ್ತು ಅವರ ವಯಸ್ಸನ್ನು ಹೇಳಲು ಆಗುವುದಿಲ್ಲ. ವಾದಿಗಳೆಲ್ಲರೂ ಹುಣಸವಾಡಿ ಗ್ರಾಮದಲ್ಲಿ ವಾಸವಾಗಿರುತ್ತಾರೆ. ವಾದಿಗಳನ್ನು ನಾನು ನೋಡಿರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ. ನಾನು 5 ನೇ ಪ್ರತಿವಾದಿಯ ಹೇಳಿಕೆಯ ಮೇರೆಗೆ ವಾದಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ. ದಾವಾ ಸ್ವತ್ತನ್ನು ಸಂಪೂರ್ಣವಾಗಿ 8 ನೇ ಪ್ರತಿವಾದಿ ಅನುಭವಿಸುತ್ತಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ.

**7.** 8 ನೇ ಪ್ರತಿವಾದಿಗೆ ಸೇರಿದ ಸ್ವತ್ತನ್ನು ಅಕ್ರಮವಾಗಿ ಪಡೆದುಕೊಳ್ಳುವ ಉದ್ದೇಶದಿಂದ ವಾದಿಗಳು, ನಾನು ಮತ್ತು ಇತರೇ ಪ್ರತಿವಾದಿಗಳು ಶಾಮೀಲಾಗಿ ದಾವೆಯನ್ನು ಹೂಡಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯಾದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಸಹಿ/-

(ಶ್ರೀ ಅಮರನಾಥ ಬಿ.ಎನ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಮಧುಗಿರಿ